

بسم اللهِ الرّحمٰن الرّحيم

# ಸುಳ್ಳು – ಎಲ್ಲ ಕೆಡುಕುಗಳ ಬೇರು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **05–02–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜೀವಿತ ಕಾಲದಲ್ಲಿ ಒಂದು ಸಭೆಯಲ್ಲಿ ಒಬ್ಬ ವ್ಯಕ್ತಿ ತನ್ನ ಭಾಷಣದಲ್ಲಿ ಹೀಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಮತ್ತು ಅನ್ಯ ಮುಸ್ಲಿಮರ ಮಧ್ಯೆ ಇರುವ ವ್ಯತ್ಯಾಸವೇನೆಂದರೆ, ಅನ್ಯ ಮುಸ್ಲಿಮರು ಈಸಬ್ನು ಮರ್‌ಯಮರವರು ಆಕಾಶದಲ್ಲಿ ಜೀವಿಸಿರುವ ರೆಂದು ನಂಬುತ್ತಾರೆ. ಆದರೆ ಅಹ್ಮದಿಯರಾದ ನಾವು ಈಸಾ ಮಸೀಹ್ ಮೃತರಾಗಿರುವರೆಂದು ನಂಬುತ್ತೇವೆ. ಈ ಒಂದು ವಿಷಯದಲ್ಲಿ ಹೊರತು ಬೇರೆ ಏನೂ ನಮ್ಮ ಮತ್ತು ಅವರ ಮಧ್ಯೆ ವಿವಾದಾಸ್ಪದವಾಗಿಲ್ಲ. ಈ ಹೇಳಿಕೆಯಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶ ಸ್ಪಷ್ಟವಾಗಿ ತಿಳಿಯುವುದಿಲ್ಲವಾದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ಇದನ್ನು ಸ್ಪಷ್ಟಪಡಿಸುವ ಉದ್ದೇಶದಿಂದ 27–12–1905ರಂದು ಒಂದು ಭಾಷಣ ಮಾಡಿದರು. ಅದರಲ್ಲಿ ಅವರು ಹೀಗೆ ಹೇಳಿದರು: ನನ್ನ ಆಗಮನದ ಉದ್ದೇಶವು ಕೇವಲ ಇಷ್ಟು ಮಾತ್ರ ವ್ಯತ್ಯಾಸವನ್ನು ಪ್ರಕಟಿಸುವುದಲ್ಲ. ಇಷ್ಟು ಚಿಕ್ಕ ಕೆಲಸಕ್ಕೋಸ್ಕರ ಅಲ್ಲಾಹನು ಜಮಾಅತನ್ನು ಸ್ಥಾಪಿಸುವ ಆವಶ್ಯಕತೆ ಇರಲಿಲ್ಲ. ಮುಸ್ಲಿಮರ ಅವಸ್ಥೆ, ಅವರ ಪ್ರವೃತ್ತಿ ಬಿಗಡಾಯಿಸಲ್ಪಟ್ಟಿವೆ. ಇದು ಅವರು ಅಧಃಪತನ ಹೊಂದಲು ಕಾರಣವಾಗುತ್ತಿದೆ. ಆದುದರಿಂದ ಮುಸ್ಲಿಮರನ್ನು ಸುಧಾರಣೆ ಮಾಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ನಿಯೋಗಿಸಿದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿಯೋಗದ ಒಂದು ಉದ್ದೇಶವು ಸುಳ್ಳು ಹೇಳುವುದರಿಂದ ಜನರನ್ನು ರಕ್ಷಿಸುವುದು ಮತ್ತು ಸತ್ಯವನ್ನು ಸಂಸ್ಥಾಪಿಸುವುದಾಗಿದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತಿನೊಂದಿಗೆ "ನಿಮ್ಮ ಸತ್ಯದ ಮಟ್ಟವನ್ನು ಉನ್ನತ ಗೊಳಿಸಿರಿ ಹಾಗೂ ನೀವು ನಿಮ್ಮ ಮತ್ತು ಅನ್ಯರ ಮಧ್ಯೆ ಇರುವ ವ್ಯತ್ಯಾಸವನ್ನು ಪ್ರಕಟಿಸಿರಿ" ಎಂದು ಹೇಳಿದರು. ಕೇವಲ ವಿಶ್ವಾಸ ಹೊಂದುವುದರಿಂದ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಸತ್ಯವಂತರೆಂದು ನಂಬುವುದರಿಂದ ಏನೂ ಪ್ರಯೋಜನವಾಗಲಾರದು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಾಸ್ತವಿಕ ಸತ್ಯವಿಶ್ವಾಸಿಯ ಬಗ್ಗೆ ಹೀಗೆ ಹೇಳಿದ್ದಾನೆ: **ಲಾ ಯಶ್‌ಹದೂನ ಝ್ಝೂರ್** ಸತ್ಯವಿಶ್ವಾಸಿಗಳು ಸುಳ್ಳು ಸಾಕ್ಷ್ಯ ಹೇಳುವುದಿಲ್ಲ.

ಅಲ್ಲಾಹನು ಶಿರ್ಕ್ (ಬಹುದೇವಾರಾಧನೆ) ಮತ್ತು ಸುಳ್ಳು ಹೇಳುವುದನ್ನು ಒಟ್ಟಿಗೆ ಸೇರಿಸಿ ಹೇಳಿರುವನು. ನೀವು ಬಹುದೇವಾರಾಧನೆ (ಶಿರ್ಕ್) ಮತ್ತು ಸುಳ್ಳಿನಿಂದ ನಿಮ್ಮನ್ನು ರಕ್ಷಿಸಿ ಕೊಳ್ಳಿರಿ ಎಂದು ಹೇಳಿರುವನು. ಇದರಿಂದ ತಿಳಿಯುವುದೇನೆಂದರೆ ಸುಳ್ಳು ಹೇಳುವ ಪಾಪಕೃತ್ಯ ಬಹುದೇವಾರಾಧನೆಯ ಹಾಗೆಯೇ ಆಗಿದೆ. ಅಲ್ಲಾಹನು ಬಳಸಿದ ಸುಳ್ಳು ಎಂಬ ಅರ್ಥದಲ್ಲಿ ಬಳಸಿದ ಪದ "ಝೂರ್" ಎಂದಾಗಿದೆ. ಸುಳ್ಳು, ಸುಳ್ಳು ಹೇಳಿಕೆ, ಸುಳ್ಳು ಸಾಕ್ಷ್ಯ, ಶಿರ್ಕ್ (ಬಹುದೇವಾರಾಧನೆ), ಸಾಮಾನ್ಯವಾಗಿ ಸುಳ್ಳುಗಳು ಪ್ರಸ್ತಾಪಿಸಲ್ಪಡುವ ಜನರ ಕೂಟಗಳು, ಸಂಗೀತ ಮತ್ತು ನಿರರ್ಥಕ ಮತ್ತು ಸುಳ್ಳು ಹೇಳುವವರ ಕೂಟ, ಇವೆಲ್ಲಾ ಝೂರ್ ಶಬ್ದದ ಅರ್ಥಗಳಾಗಿವೆ.

ಆದುದರಿಂದ ಸತ್ಯ ವಿಶ್ವಾಸಿಗಳು ಯಾರೆಂದರೆ ಅವರು ಸುಳ್ಳು ಹೇಳದವರೂ, ಸುಳ್ಳು ಹೇಳುವವರ ಮತ್ತು ನಿರರ್ಥಕ ಚಟುವಟಿಕೆಗಳಲ್ಲಿ ನಿರತರಾಗುವವರ ಸಭೆಗಳಿಗೆ ಹೋಗದವರೂ ಆಗಿರುವ ದೇವದಾಸರಾಗಿದ್ದಾರೆ. ಅವರು ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸುವುದಿಲ್ಲ ಮತ್ತು ಬಹುದೇವಾರಾಧನೆ ನಡೆಯುವಲ್ಲಿಗೆ ಅವರು ಹೋಗುವುದಿಲ್ಲ. ಅವರು ಎಂದೂ ಸುಳ್ಳು ಸಾಕ್ಷ್ಯ ಹೇಳದವರಾಗಿದ್ದಾರೆ. ಆದುದರಿಂದ ನಮ್ಮ ಪೈಕಿ ಪ್ರತಿಯೊಬ್ಬನು ಈ ರೀತಿ ಸುಳ್ಳಿನಿಂದ ತನ್ನನ್ನು ರಕ್ಷಿಸಿಕೊಂಡರೆ ಅವನು ಎಂತಹ ಬದಲಾವಣೆ ತನ್ನಲ್ಲಿ ಉಂಟುಮಾಡುವನೆಂದರೆ ಅದು ಅವನನ್ನು ವಾಸ್ತವಿಕ ಸತ್ಯವಿಶ್ವಾಸಿಯನ್ನಾಗಿ ಮಾಡುವುದು.

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಭಾಷಣದಲ್ಲಿ ಸುಳ್ಳಿನ ಬಗ್ಗೆ ಹೇಳಿದ ಕೆಲವು ಭಾಗಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ನೀವು ಲಕ್ಷ್ಯವಿಟ್ಟು ಆಲಿಸಿರಿ. ಇಂದು ನಮ್ಮವರಲ್ಲಿ ಬಹಳಷ್ಟು ಜನರಿಗೆ ಇದರ ಬಗ್ಗೆ ಚಿಂತಿಸುವ ಆವಶ್ಯಕತೆ ಇದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ಮುಸ್ಲಿಮರ ಮಧ್ಯೆ ಇರುವ ಆಂತರಿಕ ಭಿನ್ನಾಭಿಪ್ರಾಯಗಳಿಗೆ ಕಾರಣ ಅವರ ಲೌಕಿಕ ದುರಾಶೆಯಾಗಿದೆ. ಮುಸ್ಲಿಮರು ಅಲ್ಲಾಹನ ಸಂಪ್ರೀತಿ ಗಳಿಸುವುದಕ್ಕೆ ಆದ್ಯತೆ ನೀಡುವವರಾಗಿರುತ್ತಿದ್ದರೆ, ಅವರು ವಾಸ್ತವದಲ್ಲಿ ಹೆಚ್ಚು ಸ್ಪಷ್ಟವಾದ ಪಂಗಡವನ್ನು ಗುರುತಿಸಿ ಎಲ್ಲರೂ ಅದರಲ್ಲಿ ಸೇರಿ ಒಂದಾಗುತ್ತಿದ್ದರು. ಅಲ್ಲಾಹನು ಹೀಗೆ ಹೇಳಿರುವನು: **ಖುಲ್ ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ.** (ಓ ಪೈಗಂಬರ್) ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆಯಿರಿ. ಆಗ ನೀವು ನೋಡುವಿರಿ ಅಲ್ಲಾಹನು ಎಂತೆಂತಹ ಅನುಗ್ರಹಗಳನ್ನು ನಿಮಗೆ ನೀಡುತ್ತಾನೆಂದು. ಸಹಾಬರು ಆ ಹೆಜ್ಜೆ ಗುರುತುಗಳಲ್ಲಿ ಚಲಿಸಿದರು. ನೀವು ನೋಡಿರಿ ಅಲ್ಲಾಹನು ಅವರನ್ನು ಎಲ್ಲಿಂದ ಎಲ್ಲಿಗೆ ತಲುಪಿಸಿದನೆಂದು. ಅವರು ಲೌಕಿಕ ಆಶೆಗಳನ್ನು ತಿರಸ್ಕರಿಸಿ ಅದರಿಂದ ದೂರ ಸರಿದರು. ಅವರು ತಮ್ಮ ಆಶೆಗಳ ಮೇಲೆ ಒಂದು ಮೃತ್ಯುವನ್ನು ಬರಿಸಿದರು. ಈಗ ನೀವು ನಿಮ್ಮ ಸ್ಥಿತಿಯನ್ನು ಅವರ ಸ್ಥಿತಿಗೆ ಹೋಲಿಸಿ ನೋಡಿರಿ. ನೀವು ಅವರ ಹೆಜ್ಜೆಗಳಲ್ಲಿದ್ದೀರ ಎಂದು. ಅಲ್ಲಾಹನು ಜನರಿಂದ ಏನನ್ನು ಇಚ್ಛಿಸುತ್ತಾನೆಂದು ಜನರು ಮನರಿಕೆ ಮಾಡದಿರುವುದು ಖೇದಕರ ವಾಗಿದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು, ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹೇಬರಿಗೆ ಸಂಬಂಧಿಸಿದ ಒಂದು ಘಟನೆ ಹೀಗೆ ವಿವರಿಸುತ್ತಾರೆ: ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹೇಬರು ಮ್ಯಾಜಿಸ್ಟ್ರೇಟರಾಗಿದ್ದರು. ಅವರು ಹೇಳುತ್ತಾರೆ: ಒಮ್ಮೆ ನನ್ನ ಸಮೀಪಕ್ಕೆ ನನಗೆ ಪರಿಚಿತರಾಗಿದ್ದ ಒಬ್ಬ ಕಕ್ಷಿಗಾರ ಬಂದು ಹೇಳಿದನು: ನನ್ನ ವ್ಯಾಜ್ಯದ ವಿಚಾರಣೆಯನ್ನು ಮುಂದೂಡಿರಿ. ನನ್ನ ಸಾಕ್ಷಿಗಳು ಬಂದಿಲ್ಲ. ಆ ವ್ಯಕ್ತಿಯೊಂದಿಗೆ ಮ್ಯಾಜಿಸ್ಟ್ರೇಟರು ತಮಾಷೆಗಾಗಿ ಹೇಳಿದರು: ನೀವು ಬಹಳ ಬುದ್ಧಿಶಾಲಿ ಎಂದು ನಾನು ಭಾವಿಸಿದ್ದೆ. ನೀವು ಅವಿವೇಕಿ ಎಂದು ತಿಳಿಯಿತು. ಸಾಕ್ಷಿಗಳನ್ನು ನೀವು ಎಲ್ಲಿಂದ ತರುವಿರಿ. ನೀವು ಹೊರಗೆ

ಹೋಗಿ ನೋಡಿರಿ, ಎಂಟಾಣೆ, ಒಂದು ರೂಪಾಯಿಗೆ ಸಾಕ್ಷಿ ಹೇಳುವವರು ಸಿಗುವರು ಎಂದು ಹೇಳಿದರು. ಆ ವ್ಯಕ್ತಿ ಹೊರಗೆ ಹೋಗಿ ಎರಡು ಮೂರು ಜನರನ್ನು ಸಾಕ್ಷಿ ಹೇಳಲು ಕರೆ ತಂದನು. ವಿಚಾರಣೆ ನಡೆದಾಗ ಸಾಕ್ಷಿ ಹೇಳುತ್ತಿದ್ದನು: ನಾನು ಅದನ್ನು ಕಂಡೆನು ಇದನ್ನು ಕಂಡೆನು ಎಂದು. ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹೇಬರು ಹೇಳುತ್ತಾರೆ: ನಾನು ಒಳಗೊಳಗೆ ನಗುತ್ತಾ ಇದ್ದೆ ಮತ್ತು ಸಾಕ್ಷಿಗಳನ್ನು ತಂದವನ ಮುಂದೆ ಸಹ ನಗುತ್ತಿದ್ದೆ. ನಾನು ಹೇಳಿದ ಪ್ರಕಾರ ಈತ ಹೊರಗೆ ಹೋಗಿ ಸಾಕ್ಷಿಗಳನ್ನು ತಂದಿದ್ದನು. ಈ ಸಾಕ್ಷಿಗಳು ಎಷ್ಟು ಸ್ಪಷ್ಟವಾಗಿ ನನ್ನ ಮುಂದೆ ಸುಳ್ಳು ಹೇಳುತ್ತಿದ್ದಾರೆ. ಮತ್ತು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಪವಿತ್ರ ಖುರ್‌ಆನ್ ಮೇಲೆ ಕೈ ಇಟ್ಟು ಸುಳ್ಳು ಹೇಳುತ್ತಿದ್ದಾರೆ. ಸಾಕ್ಷಿ ವಿಚಾರಣೆ ಮುಗಿದ ನಂತರ ಹಝ್ರತ್ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹೇಬರು ಹೇಳಿದರು: ನಿನಗೆ ನಾಚಿಕೆ ಆಗುವುದಿಲ್ಲವೇ. ನಾನು ಹೇಳಿದ ನಂತರ ಕರೆದುಕೊಂಡು ಬಂದ ನಿನ್ನ ಸಾಕ್ಷಿಗಳು ಪವಿತ್ರ ಖುರ್‌ಆನ್ ಮೇಲೆ ಕೈ ಇಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದಾರೆ.

ಸಾಕ್ಷಿಗಳ ಸ್ಥಿತಿ ಹೀಗೆ ಇದೆ. ಇಂದು ಸಹ ಇದೇ ಸ್ಥಿತಿ ಇದೆ. ನಮ್ಮ ಜಮಾಅತಿನ ವಿರುದ್ಧ ನಡೆಯುವ ಮೊಕದ್ದಮೆಗಳಲ್ಲಿ ನಾವು ಹೆಚ್ಚಾಗಿ ಕಾಣುವುದೇನೆಂದರೆ ಕೆಲವರು ಅಪರಾಧಿಗಳಾಗಿಲ್ಲವಾದರೂ ಅವರು ಯಾರದಾದರೂ ಪರವಾಗಿ ಸಾಕ್ಷಿ ಹೇಳಲು ಬರುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಂದು ಲೋಕದ ಸ್ಥಿತಿ ಬಹಳ ಬಿಗಡಾಯಿಸಿದೆ. ಎಲ್ಲಾ ರೀತಿಗಳಲ್ಲಿ ಸುಳ್ಳು ಸಾಕ್ಷಿಗಳನ್ನು ಸಿದ್ಧಪಡಿಸಲಾಗುತ್ತದೆ. ಸುಳ್ಳು ಮೊಕದ್ದಮೆ ಮಾತ್ರವಲ್ಲ ಸುಳ್ಳು ಸರ್ಟಿಫಿಕೇಟುಗಳನ್ನು ಸಹ ಮಾಡುತ್ತಾರೆ. ಅಲ್ಲಾಹನು ಸುಳ್ಳನ್ನು ಕೊಳಕು ಎಂದೂ ಅದರಿಂದ ದೂರ ಸರಿಯಬೇಕೆಂದೂ ಹೇಳಿರುವನು. **ಫಜ್‌ತನಿಬುರ್ರಿಜ್‌ಸ ಮಿನಲ್ ಅವ್‌ಸಾನಿ ವಜ್‌ತನಿಬೂ ಖೌಲಝ್ಝೂರಿ.** ಈ ವಚನದಲ್ಲಿ ಅಲ್ಲಾಹನು ವಿಗ್ರಹಾರಾಧನೆಯನ್ನು ಸುಳ್ಳು ಹೇಳುವುದರೊಂದಿಗೆ ಸೇರಿಸಿ ಹೇಳಿರುತ್ತಾನೆ. ಅವಿವೇಕಿಯಾದ ಮನುಷ್ಯನು ಯಾವ ರೀತಿ ಅಲ್ಲಾಹನನ್ನು ಬಿಟ್ಟು ವಿಗ್ರಹದ ಕಡೆಗೆ ಬಾಗುತ್ತಾನೋ ಅದೇ ರೀತಿ ಸತ್ಯವನ್ನು ಬಿಟ್ಟು ತನ್ನ ಸ್ವಾರ್ಥಕ್ಕೋಸ್ಕರ ಸುಳ್ಳನ್ನು ತನ್ನ ಆರಾಧನೆಯ ವಿಗ್ರಹವಾಗಿ ಮಾಡಿಕೊಳ್ಳುತ್ತಾನೆ. ಇದೇ ಕಾರಣದಿಂದ ಅಲ್ಲಾಹನು ಸುಳ್ಳು ಹೇಳುವುದನ್ನು ವಿಗ್ರಹಾರಾಧನೆಯೊಂದಿಗೆ ಸೇರಿಸಿ ಹೇಳಿದ್ದಾನೆ. ಒಬ್ಬ ವಿಗ್ರಹಾರಾಧಕ ವಿಗ್ರಹದ ಮೂಲಕ ಮೋಕ್ಷ ಗಳಿಸಲು ಇಚ್ಛಿಸುತ್ತಾನೆ. ಸುಳ್ಳು ಹೇಳುವವನು ಸಹ ಇದೇ ರೀತಿ ಒಂದು ವಿಗ್ರಹ ತಾನೇ ನಿರ್ಮಿಸಿಕೊಂಡು ಆ ವಿಗ್ರಹದ ಮೂಲಕ ಮೋಕ್ಷ ಲಭಿಸುವುದೆಂದು ಭಾವಿಸುತ್ತಾನೆ. ಇದೆಂತಹ ದುರವಸ್ಥೆ. ಅವರೊಂದಿಗೆ ನೀವು ಏಕೆ ವಿಗ್ರಹಾರಾಧನೆ ಮಾಡುತ್ತೀರಿ? ನೀವು ಕೊಳಕನ್ನು ಬಿಟ್ಟು ಬಿಡಿರಿ ಎಂದು ಹೇಳಿದರೆ ಅವರು ಹೀಗೆ ಉತ್ತರ ಹೇಳುತ್ತಾರೆ: ನಾವು ಹೇಗೆ ಬಿಡಲು ಸಾಧ್ಯ. ಅದಿಲ್ಲದೆ ಬದುಕಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಇದಕ್ಕಿಂತ ದೊಡ್ಡ ದುರದೃಷ್ಟ ಬೇರೆ ಏನಿದೆ. ಅವರು ಸುಳ್ಳಿನ ಮೇಲೆ ತಮ್ಮ ಜೀವನಾಧಾರ ಇರಿಸಿದ್ದಾರೆ. ಆದರೆ ನಾನು ನಿಮಗೆ ದೃಢವಾಗಿ ತಿಳಿಸಲು ಬಯಸುತ್ತೇನೆ. ಕೊನೆಗೆ ಸತ್ಯವೇ ಜಯಶಾಲಿಯಾಗಲಿದೆ. ಸತ್ಯವೇ ಒಳಿತನ್ನೂ ಜಯವನ್ನೂ ತರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನಗೆ ಸಂಬಂಧಿಸಿದ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ನಾನು ಇಸ್ಲಾಮ್ ಧರ್ಮದ ಪರವಾಗಿ ಆರ್ಯಾ ಸಮಾಜಿಗಳ ಎದುರಿಗೆ ಬರೆದ ಒಂದು ಲೇಖನವನ್ನು ಒಬ್ಬ ಕ್ರೈಸ್ತನ ಮುದ್ರಣಾಲಯಕ್ಕೆ ಒಂದು ಪ್ಯಾಕೆಟ್‌ನಲ್ಲಿ ಇರಿಸಿ ಕಳುಹಿಸಿದ್ದೆ. ಆ ಪ್ಯಾಕೆಟಿನ ಎರಡು ಬದಿಗಳೂ ತೆರೆದಿದ್ದುವು. ಅದರೊಳಗೆ ಒಂದು ಪತ್ರ ಸಹ ಇರಿಸಿದ್ದೆ. ಆ ಪತ್ರದಲ್ಲಿ ಇಸ್ಲಾಮಿಗೆ ಬೆಂಬಲವಾಗಿ ಮತ್ತು ಅನ್ಯಧರ್ಮಗಳ ಮಿಥ್ಯತೆಗಳ ಬಗ್ಗೆ ವಿವರಣೆ ಇತ್ತು ಮತ್ತು ಲೇಖನ ಮುದ್ರಿಸುವ ಬಗ್ಗೆ ಅಪೇಕ್ಷಿಸಲಾಗಿತ್ತು. ಇದರಿಂದ ಕ್ರೈಸ್ತನಾದ ಆ ಮುದ್ರಣಾಲಯದ ಮಾಲಿಕ ಸಿಟ್ಟುಗೊಂಡನು. ನನ್ನ ವಿರುದ್ಧ ಆಕ್ರಮಣ ಮಾಡಲು ಅವನಿಗೆ ಸಂದರ್ಭ ಲಭಿಸಿತು. ಆ ತೆರೆದ ಪ್ಯಾಕೆಟ್‌ನಲ್ಲಿ ಪತ್ರ ಇರಿಸುವುದು ಕಾನೂನು ಪ್ರಕಾರ ಅಪರಾಧವಾಗಿತ್ತು. ಆದರೆ ಅದರ ಬಗ್ಗೆ ನನಗೆ ತಿಳಿದಿರಲಿಲ್ಲ. ಆ ಅಪರಾಧಕ್ಕೆ ಅಂಚೆ ನಿಯಮಗಳ ಪ್ರಕಾರ ಐನೂರು ರೂಪಾಯಿ ದಂಡ ಅಥವಾ ಆರು ತಿಂಗಳ ಜೈಲುವಾಸದ ಶಿಕ್ಷೆ ನೀಡಬಹುದು. ಆದುದರಿಂದ ಮುದ್ರಣಾಲಯದ ಒಡೆಯ ಪತ್ರದ ವಿಷಯದ ಸಮಾಚಾರ ಅಂಚೆ ಅಧಿಕಾರಿಗೆ ನೀಡಿ ನನ್ನ ವಿರುದ್ಧ ಮೊಕದ್ದಮೆ ದಾಖಲಾಗುವಂತೆ ಮಾಡಿದನು. ಹಾಗೆ ನನ್ನನ್ನು ಗುರುದಾಸಪುರಕ್ಕೆ ವಿಚಾರಣೆಗೆ ಕರೆಯಲಾಯಿತು. ಈ ಮೊಕದ್ದಮೆ ಬಗ್ಗೆ ವಕೀಲರಿಂದ ಸಲಹೆ ಕೇಳಿದಾಗ ಅವರೆಲ್ಲ ಹೇಳಿದ್ದು ಸುಳ್ಳು ಹೇಳದೆ ಬೇರೆ ದಾರಿ ಇಲ್ಲ ಎಂದಾಗಿತ್ತು. ಪತ್ರ ನಾನು ಆ ಪ್ಯಾಕೆಟ್‌ನಲ್ಲಿ ಇರಿಸಿಲ್ಲ ಮುದ್ರಣಾಲಯದ ಮಾಲಿಕ ರಲಿಯಾ ರಾಮನೇ ಸ್ವತಃ ಪತ್ರ ಇರಿಸಿದ್ದಾನೆ ಎಂದು ಹೇಳಿರಿ. ಇಂತಹ ಸಂದರ್ಭದಲ್ಲಿ ಸಾಕ್ಷಿಗಳ ಆವಶ್ಯಕತೆ ಇರುತ್ತದೆ. ಮೂರುನಾಲ್ಕು ಸುಳ್ಳು ಸಾಕ್ಷಿಗಳಿಂದ ಸಾಕ್ಷಿ ಹೇಳಿಸಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಹುದು ಎಂದು ಎಲ್ಲ ವಕೀಲರೂ ಸಲಹೆ ನೀಡಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಂದುವರಿಸಿ ಹೇಳುತ್ತಾರೆ: ನಾನು ಎಲ್ಲರೊಂದಿಗೆ ಹೇಳಿದೆ: ಯಾವ ಕಾರಣಕ್ಕೂ ನಾನು ಯಾವುದೇ ಸಂದರ್ಭದಲ್ಲಿ ಸತ್ಯವನ್ನು ಕೈ ಬಿಡಲಾರೆ. ಏನು ಆಗಲಿದೆಯೋ ಹಾಗೆ ಆಗಲಿ ಎಂದು ಹೇಳಿದೆ. ನನ್ನನ್ನು ಒಬ್ಬ ಆಂಗ್ಲೇಯ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಯಿತು. ನನ್ನೆದುರಿಗೆ ಅಂಚೆ ಅಧಿಕಾರಿ ಹಾಜರಾಗಿದ್ದರು. ನನ್ನೊಂದಿಗೆ ಮೊತ್ತ ಮೊದಲು ಹೀಗೆ ಕೇಳಲಾಯಿತು. ನೀವು ಈ ಪತ್ರವನ್ನು ಪ್ಯಾಕೆಟಿನಲ್ಲಿ ಇರಿಸಿದಿರೋ ಎಂದು. ಈ ಪತ್ರ ಮತ್ತು ಪ್ಯಾಕೆಟ್ ನಿಮ್ಮದೇ ಅಲ್ಲವೇ ಎಂದು ನನ್ನೊಡನೆ ಕೇಳಲಾಯಿತು. ಆಗ ನಾನು ಕೂಡಲೆ ಉತ್ತರ ಹೇಳಿದೆ ಅದು ನನ್ನ ಪತ್ರವೇ ಆಗಿದೆ. ನಾನೇ ಪ್ಯಾಕೆಟ್‌ನಲ್ಲಿ ಅದನ್ನು ಇರಿಸಿದ್ದೆ. ಆದರೆ ಸರಕಾರಕ್ಕೆ ನಷ್ಟ ಉಂಟುಮಾಡುವ ಉದ್ದೇಶದಿಂದ ನಾನು ಹಾಗೆ ಮಾಡಿದ್ದಲ್ಲ ಎಂದು ಹೇಳಿದೆ. ಅಂಚೆ ಅಧಿಕಾರಿ ನನ್ನ ವಿರುದ್ಧ ಬಹಳ ಗಂಭೀರವಾಗಿ ವಾದಿಸಿದರು. ಅನಂತರ ನ್ಯಾಯಾಧೀಶ ತೀರ್ಪು ಬರೆಯಲು ತೊಡಗಿದರು. ಪ್ರಾಯಶಃ ಒಂದು ಅಥವಾ ಒಂದೂವರೆ ಗೆರೆಯಷ್ಟು ಬರೆದು ಹೇಳಿದರು: ನಿಮ್ಮನ್ನು ಅಪರಾಧದಿಂದ ಮುಕ್ತರನ್ನಾಗಿ ಮಾಡಲಾಗಿದೆ ಎಂದು ಹೇಳಿದರು. ಈ ತೀರ್ಪು ಆಲಿಸಿ ನಾನು ನ್ಯಾಯಾಲಯದ ಹೊರಗೆ ಬಂದೆನು. ಔದಾರ್ಯ ತೋರಿಸಿದ ಅಲ್ಲಾಹನಿಗೆ ನಾನು ಕೃತಜ್ಞತೆ ಅರ್ಪಿಸಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸುಳ್ಳು ಹೇಳದೆ ಜೀವಿಸಲು ಸಾಧ್ಯವಿಲ್ಲ ಎಂದು ನಾನು ಹೇಗೆ ತಾನೆ ಹೇಳಲಿ. ಇಂತಹ ಮಾತುಗಳು ಅವಿವೇಕದವುಗಳಾಗಿವೆ. ಯಥಾರ್ಥವೇನೆಂದರೆ ಸತ್ಯ ಹೇಳದೆ ಜೀವಿಸಲು ಸಾಧ್ಯವಿಲ್ಲ ಎಂಬುದಾಗಿದೆ. **ಮನ್ ಯತವಕ್ಕಲ್ ಅಲಲ್ಲಾಹಿ ಫ ಹುವ ಹಸ್‌ಬುಹೂ** ಯಾರು ಅಲ್ಲಾಹನ ಮೇಲೆ ಪೂರ್ಣ ಭರವಸೆ ಇರಿಸುತ್ತಾನೋ ಅವನಿಗೆ ಅಲ್ಲಾಹನು ಸಾಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನೆನಪಿಟ್ಟು ಕೊಳ್ಳಿರಿ, ಸುಳ್ಳಿನಷ್ಟು ಕೆಡುಕುಂಟುಮಾಡುವ ವಸ್ತು ಬೇರೊಂದಿಲ್ಲ. ಸಾಮಾನ್ಯವಾಗಿ ಲೌಕಿಕ ಜನರು ಹೇಳುತ್ತಾರೆ ಸತ್ಯ ಹೇಳುವುದ ರಿಂದ ಸಂಕಟಕ್ಕೆ ಸಿಲುಕುತ್ತಾರೆಂದು. ಆದರೆ ನಾನು ಇದನ್ನು ಹೇಗೆ ತಾನೆ ಅಂಗೀಕರಿಸಲಿ. ನನ್ನ ವಿರುದ್ಧ ಏಳು ಮೊಕದ್ದಮೆಗಳು ನಡೆದವು. ಅಲ್ಲಾಹನ ಅನುಗ್ರಹದಿಂದ ಯಾವುದೇ ಒಂದು ಮೊಕದ್ದಮೆಗೆ ಸಂಬಂಧಿಸಿಯೂ ಒಂದು

ಶಬ್ದ ಸಹ ಸುಳ್ಳು ಹೇಳುವ ಆವಶ್ಯಕತೆ ನನಗೆ ಉಂಟಾಗಲಿಲ್ಲ. ಯಾವುದಾದರೂ ಒಂದು ಮೊಕದ್ದಮೆಯಲ್ಲಿ ಅಲ್ಲಾಹನು ನನ್ನನ್ನು ಸೋಲಿಸಿದನು ಎಂದು ಯಾರಾದರೂ ಹೇಳ ಬಲ್ಲರೇ?. ಅಲ್ಲಾಹನು ಸತ್ಯವನ್ನು ಬೆಂಬಲಿಸುವವನೂ ಸಹಾಯಕನೂ ಆಗಿದ್ದಾನೆ. ಸತ್ಯವಂತನನ್ನು ಅಲ್ಲಾಹನು ಶಿಕ್ಷಿಸುವುದು ಸಾಧ್ಯವೇ?

ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಸತ್ಯ ಹೇಳುವುದರಿಂದ ಯಾರಿಗಾದರೂ ಶಿಕ್ಷೆ ಲಭಿಸಿದ್ದರೆ, ಅವರು ಶಿಕ್ಷೆ ಪಡೆಯುವುದು ಸತ್ಯ ಹೇಳಿದ ಕಾರಣದಿಂದಲ್ಲ. ಆ ಶಿಕ್ಷೆ ಅವರ ಸೂಕ್ಷ್ಮಾತಿ ಸೂಕ್ಷ್ಮ ಕೆಟ್ಟ ಕೆಲಸಗಳ ಕಾರಣದಿಂದಾಗಿರುತ್ತವೆ. ಮತ್ತು ಬೇರೆ ಯಾವುದೋ ಸುಳ್ಳಿಗೆ ಶಿಕ್ಷೆಯಾಗಿರುತ್ತದೆ. ಅಲ್ಲಾಹನ ಬಳಿಯಲ್ಲಿ ಅವರ ಕೆಟ್ಟ ಕೆಲಸಗಳ ಪಟ್ಟಿಯೇ ಇರುತ್ತದೆ. ಅವರು ಅನೇಕ ತಪ್ಪುಗಳನ್ನು ಮಾಡಿರುತ್ತಾರೆ. ಅವರು ಯಾವುದಾದರೊಂದು ತಪ್ಪಿನ ಕಾರಣ ಶಿಕ್ಷೆ ಗಳಿಸುತ್ತಾರೆ.

ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಸತ್ಯವನ್ನು ಅವಲಂಬಿಸುವವನು ಎಂದೂ ಹೀನೈಸಲ್ಪಡಲಾರನು. ಅವನು ಅಲ್ಲಾಹನ ರಕ್ಷಣೆಯಲ್ಲಿರುತ್ತಾನೆ. ಅಲ್ಲಾಹನ ರಕ್ಷಣೆಗಿಂತ ಭದ್ರವಾದ ಯಾವ ಕೋಟೆಯೂ ಇಲ್ಲ. ಆದರೆ ಅಪೂರ್ಣವಾದುದು ಲಾಭಕರವಾಗದು. ಒಬ್ಬನಿಗೆ ದಾಹವಿರುವಾಗ ಒಂದು ಹನಿ ನೀರಿನಿಂದ ದಾಹಶಮನ ಆಗುವುದೆಂದು ಹೇಳಲು ಸಾಧ್ಯವೇ. ಕಠಿಣವಾಗಿ ಹಸಿದಿರುವಾಗ ಒಂದು ಧಾನ್ಯ ಅಥವಾ ಒಂದು ತುತ್ತಿನಿಂದ ಹೊಟ್ಟೆ ತುಂಬುವುದೇ. ಖಂಡಿತವಾಗಿಯೂ ಸಾಧ್ಯವಿಲ್ಲ. ಪರ್ಯಾಪ್ತವಾಗಿ ನೀರು ಕುಡಿಯದೆ ದಾಹ ಶಮನವಾಗಲಾರದು. ಹೊಟ್ಟೆ ತುಂಬಾ ಆಹಾರ ತಿನ್ನದೆ ಹಸಿವು ನಿವಾರಣೆಯಾಗಲಾರದು. ಇದೇ ರೀತಿ ಮನುಷ್ಯನು ಮಾಡುವ ಸತ್ಕರ್ಮಗಳು ಪರಿಪೂರ್ಣವಾಗದಿದ್ದರೆ ಅದರಿಂದ ದೊರಕಬಹುದಾದ ಪ್ರತಿಫಲಗಳು ಲಭಿಸಲಾರವು. ನ್ಯೂನತೆಗಳಿಂದ ಕೂಡಿದ ಕರ್ಮಗಳು ಅಲ್ಲಾಹನನ್ನು ಸಂತೋಷಪಡಿಸಲಾರವು. ಅವು ಅನುಗ್ರಹದಾಯಕವೂ ಆಗಲಾರವು. ಅಲ್ಲಾಹನು ಮಾಡಿರುವ ವಾಗ್ದಾನವೇನೆಂದರೆ ನನ್ನ ಇಚ್ಛೆಯ ಪ್ರಕಾರ ನೀವು ಕೆಲಸ ಮಾಡಿರಿ. ಆಗ ನಾನು ನಿಮಗೆ ಅನುಗ್ರಹ ನೀಡುವೆನು. ನೀವು ನಿಷ್ಠೆಯಿಂದ ಒಂದಿಷ್ಟು ಸತ್ಕರ್ಮ ಮಾಡಿದರೂ ಅಲ್ಲಾಹನು ಅದನ್ನು ನಿಷ್ಫಲಗೊಳಿಸಲಾರನು. ಅಲ್ಲಾಹನು ಸ್ವತಃ ಹೇಳಿದ್ದಾನೆ: **ಮನ್ ಯಅ್‌ಮಲ್ ಮಿಸ್‌ಖಾಲ ಝರ್ರತಿನ್ ಖೈರನ್ ಯರಃ.** ಯಾರಾದರೂ ಒಂದಿಷ್ಟು ಒಳಿತನ್ನು ಮಾಡಿದರೂ ಅದರ ಪರಿಣಾಮವನ್ನು ಅವನು ಕಾಣುವನು. ಆದುದರಿಂದ ಒಂದಿಷ್ಟು ಒಳಿತನ್ನು ಮಾಡಿದರೂ ಅಲ್ಲಾಹನು ಅದಕ್ಕೆ ಪ್ರತಿಫಲ ನೀಡುವನು.

ಈ ವಿಷಯಗಳನ್ನೆಲ್ಲ ಎದುರಿಗೆ ಇರಿಸಿ ಪ್ರತಿಯೊಬ್ಬ ಅಹ್ಮದಿ ತನ್ನ ಕೃತ್ಯಗಳನ್ನು ಅವಲೋಕನ ಮಾಡಬೇಕು. ನಾನು ಕೆಲವು ವಿಷಯಗಳನ್ನು ಹೇಳುತ್ತೇನೆ: ಮೊಕದ್ದಮೆಗಳಿಗೆ ಸಂಬಂಧಿಸಿ ನಾವು ತಪ್ಪು ಹೇಳಿಕೆ ನೀಡಿರುವೆವೋ ಎಂದು ನೋಡಬೇಕು. ನಾವು ವ್ಯಾಪಾರದಲ್ಲಿ ಲಾಭಗಳಿಸುವ ಉದ್ದೇಶದಿಂದ ತಪ್ಪು ಹೇಳಿಕೆ ನೀಡುತ್ತೇವೋ ಎಂದು ಪರಾಂಬರಿಸಬೇಕು. ನಾವು ವಿವಾಹ ಸಂಬಂಧ ಸ್ಥಾಪಿಸಲು ಸುಳ್ಳು ಹೇಳುತ್ತೇವೆಯೋ ಎಂದು ಪರಿಶೀಲಿಸಬೇಕು. ನಾವು ಪ್ರತಿಯೊಂದು ರೀತಿಯಲ್ಲಿ **ಖೌಲೇಸದೀದ್** (ನೇರವಾದ ಮಾತು) ಬಳಸುತ್ತೇವೋ ಎಂದು ನೋಡಬೇಕು. ಹುಡುಗನ ಬಗ್ಗೆ ಅಥವಾ ಹುಡುಗಿಯ ಬಗ್ಗೆ ಪ್ರತಿಯೊಂದು ಮಾಹಿತಿ ಸತ್ಯವಾಗಿ ನೀಡಬೇಕು. ಸೋಶಿಯಲ್ ಮತ್ತು ವೆಲ್‌ಫೇರ್ ಎಲೆವನ್ಸ್ ಗಳಿಸಲು ಸುಳ್ಳು ಹೇಳುತ್ತಿದ್ದೇವೆಯೋ ಎಂದು ನೋಡಬೇಕು. ಇದಕ್ಕೆ ಸಂಬಂಧಿಸಿ ಅನೇಕರ ಬಗ್ಗೆ ತಪ್ಪು ಅಭಿಪ್ರಾಯಗಳಿವೆ. ಅವರು ತಮ್ಮ ನಿಜವಾದ ಆದಾಯ ರಹಸ್ಯವಾಗಿಟ್ಟು ಸರಕಾರದಿಂದ ಸಹಾಯಧನ ಪಡೆಯುತ್ತಾರೆ ಎಂದು. ಇದೇ ಕಾರಣದಿಂದ ಅವರು ಒಳಿತುಗಳನ್ನು ಮಾಡುವುದಿಲ್ಲ. ಅವರು ತೆರಿಗೆ ಸಹ ವಂಚಿಸುತ್ತಾರೆ. ನಾವು ನೆನಪಿಡಬೇಕಾದುದೇನೆಂದರೆ ಲೋಕದ ಇಂದಿನ ಸಾಮಾನ್ಯ ಆರ್ಥಿಕ ಪರಿಸ್ಥಿತಿಯ ಕಾರಣದಿಂದ ಲೋಕದ ಪ್ರತಿಯೊಂದು ಸರಕಾರ ಹಲವಾರು ಸಮಸ್ಯೆಗಳಿಗೆ ತುತ್ತಾಗಿದೆ. ಅಥವಾ ಮುಂದೆ ಹಾಗೆ ಆಗುವುದು. ಆದುದರಿಂದ ಸರಕಾರಗಳು ಪ್ರಜೆಗಳ ನಿಜಸ್ಥಿತಿಯನ್ನು ತಿಳಿಯಲು ಪ್ರಯತ್ನಿಸುತ್ತಿವೆ. ಆದುದರಿಂದ ಸರಕಾರದ ಮುಂದೆ ಯಾರದಾದರೂ ಅಪರಾಧ ಕಂಡು ಬಂದರೆ ಅದು ತಪ್ಪು ಮಾಡಿದ ವ್ಯಕ್ತಿಗೆ ದೋಷಕರವಾಗುವುದಲ್ಲದೆ ಅದು ಅಹ್ಮದಿಯ್ಯತ್ತಿಗೆ ಅಪಕೀರ್ತಿಕರವೂ ಆಗುವುದು– ಆ ವ್ಯಕ್ತಿ ಅಹ್ಮದಿ ಎಂದು ಗೊತ್ತಾದರೆ. ಆದುದರಿಂದ ತಪ್ಪು ಹೇಳಿಕೆ ನೀಡಿ ಲಾಭಗಳಿಸುವವರು ತಮ್ಮ ಖರ್ಚು ವೆಚ್ಚಗಳನ್ನು ಕಡಿತಗೊಳಿಸಿ ಸುಳ್ಳಿನಿಂದ ರಕ್ಷಣೆ ಪಡೆಯಬೇಕು ಮತ್ತು ಅಲ್ಲಾಹನನ್ನು ಸಂಪ್ರೀತನನ್ನಾಗಿ ಮಾಡಲು ಪ್ರಯತ್ನಿಸಬೇಕು. ಹುದ್ದೇದಾರರು ಸಹ ತಮ್ಮನ್ನು ಪರಿಶೀಲನೆ ಮಾಡಬೇಕು. ತಾವು ತಪ್ಪು ವರದಿಗಳನ್ನು ವರದಿ ಮಾಡುವುದಿಲ್ಲ ಅಥವಾ ಮುಖ್ಯ ವಿಷಯಗಳನ್ನು ಬಚ್ಚಿಡುವುದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ನಾನು ಇದರ ಮೊದಲು ಒಂದು ಖುತ್‌ಬದಲ್ಲಿ ಹೇಳಿದ ಹಾಗೆ, ಕೆಲವು ಸಾರಿ ತಪ್ಪಾಗಿ ವರದಿ ಬರೆಯದಿದ್ದರೂ ಪೂರ್ಣ ವಿವರ ಸತ್ಯವಾಗಿ ನೀಡದಿದ್ದರೆ ಅದು ಸಹ ತಪ್ಪು ಕೆಲಸ ಆಗಿರುತ್ತದೆ. ಭಯಭಕ್ತಿಯಿಂದ ಎಲ್ಲಾ ಕೆಲಸಗಳನ್ನು ಮಾಡಬೇಕು. ಎಲ್ಲಾ ವಿಷಯಗಳನ್ನೂ ತಳಸ್ಪರ್ಶಿಯಾಗಿ ಪರಿಶೀಲಿಸಬೇಕಾದುದು ಆವಶ್ಯಕವಾಗಿದೆ. ಪ್ರತಿಯೊಬ್ಬರು ತಮ್ಮ ಸ್ವಾರ್ಥ ಹಿತಾಸಕ್ತಿಯನ್ನು ಪೂರ್ಣವಾಗಿ ಬಿಟ್ಟು, ತಮ್ಮ ಅಹಂಭಾವವನ್ನು ಬಿಟ್ಟು ಅಲ್ಲಾಹನ ಭಯವನ್ನು ಮುಂದೆ ಇರಿಸಿ ತಮ್ಮ ವ್ಯವಹಾರಗಳನ್ನು ಮಾಡಬೇಕು. ಹೀಗೆ ಮಾಡದಿದ್ದರೆ ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಹಾಗೆ ಅದು ಲೌಕಿಕ ದುರಾಶೆಗಳ ಪ್ರಕಟಣೆ ಆಗಿದೆ. ಲೌಕಿಕ ದುರಾಶೆಗಳು ಒಡಕಿನ ಕಡೆಗೆ ಒಯ್ಯುತ್ತದೆ. ಮತ್ತು ಇದರಿಂದ ಜಮಾಅತಿನ ಏಕತೆಗೆ ಸಹ ಭಂಗ ಉಂಟಾಗುತ್ತದೆ. ಅಥವಾ ಇಂತಹ ಸ್ಥಳದಲ್ಲಿ ಒಂದು ಅಸ್ತವ್ಯಸ್ತತೆ ತಲೆದೋರುತ್ತದೆ. ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಲು ಉದ್ದೇಶಿಸಿದ ಏಕತೆ ಅಲ್ಲಿ ಕೊನೆಗೊಳ್ಳುತ್ತದೆ. ಲೌಕಿಕ ದುರಾಶೆಗಳ ಕಾರಣದಿಂದಲೇ ಪಂಗಡಗಳು ಉಂಟಾದುವು. ಇದೇ ರೀತಿ ಇನ್ನೊಂದು ಪಂಗಡ ಜನಿಸುವುದು. ಒಂದು ಕೆಡುಕಿನಿಂದ ಅನೇಕ ಕೆಡುಕುಗಳು ಹುಟ್ಟುವುವು. ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ಕೆಡುಕುಗಳಿಂದ ಕೆಡುಕಿನ ಮರಿಗಳು ಜನಿಸುತ್ತಾ ಇರುತ್ತವೆ.

ಅಹ್ಮದಿಯರಾದ ನಮ್ಮ ಮೇಲೆ ಬಹಳ ಹೊಣೆಗಾರಿಕೆಗಳಿವೆ. ನಾವು ಅವುಗಳನ್ನು ನಮ್ಮ ಮುಂದೆ ಇರಿಸಬೇಕು. ವಾಸ್ತವಿಕ ಅಹ್ಮದಿ ಹರ್ಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಪ್ರಕಾರ ವರ್ತಿಸಲು ಪ್ರಯತ್ನಿಸುತ್ತಾನೆ. ಅವನು ಅಲ್ಲಾಹನಿಗೆ ಸೇರಿದವನಾಗಲು ಪ್ರಯತ್ನಿಸುತ್ತಾನೆ. ಹರ್ಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ಯಾರು ಅಲ್ಲಾಹನಿಗೆ ಸೇರಿದವನಾಗಲು ಪ್ರಯತ್ನ ಮಾಡುತ್ತಾನೋ ಅಲ್ಲಾಹನು ಅವನಿಗೆ ಸೇರಿದವನಾಗುತ್ತಾನೆ. ಅಲ್ಲಾಹನು ಯಾರಿಂದಲೂ ಮೋಸಕ್ಕೊಳಗಾಗಲಾರನು. ಯಾರಾದರೂ ತೋರಿಕೆಯ ಕರ್ಮದಿಂದ ಅಲ್ಲಾಹನನ್ನು ಮೋಸಗೊಳಿಸಲು ಸಾಧ್ಯವೆಂದು ಭಾವಿಸುವುದಾದರೆ ಅದು ಅವನ ಅವಿವೇಕವಾಗಿದೆ. ಅವನು ಸ್ವತಃ ಮೋಸಕ್ಕೊಳಗಾಗಿರುವನು. ಲೋಕದ ಸೌಂದರ್ಯ ಮತ್ತು ಲೋಕದ ಬಗ್ಗೆ ಪ್ರೀತಿ ಇದುವೇ ಎಲ್ಲಾ ತಪ್ಪು ಕೆಲಸಗಳ ಬೇರು ಆಗಿವೆ. ಆದುದರಿಂದ ಅಲ್ಲಾಹನ ಮಹತ್ವವನ್ನು ಯಾವಾಗಲೂ ಹೃದಯದಲ್ಲಿರಿಸಬೇಕು. ಮತ್ತು ಯಾವಾಗಲೂ ಅವನಿಗೆ

ಭಯಪಡಬೇಕು. ಅಲ್ಲಾಹನ ಹಿಡಿತ ಬಹಳ ಅಪಾಯಕರವಾಗಿರುತ್ತದೆ. ಅವನು ಅಪರಾಧಗಳನ್ನು ಕಡೆಗಣಿಸುತ್ತಾನೆ ಮತ್ತು ಕ್ಷಮಿಸುತ್ತಾನೆ. ಆದರೆ ಅವನು ಯಾರನ್ನಾದರೂ ಹಿಡಿಗೂಡಿದರೆ ಅವನ ಹಿಡಿತ ಬಹಳ ಕಠಿಣ ವಾಗಿರುತ್ತದೆ. **ಲಾ ಯಖಾಫು ಉಖ್‌ಬಾಹಾ** ಎಂದು ಅಲ್ಲಾಹನು ಹೇಳುತ್ತಾನೆ. ಅವನ ವಾರೀಸುದಾರರ ಸ್ಥಿತಿ ಏನಾಗುವುದೆಂದು ಅವನು ಪರಿಗಣಿಸುವುದಿಲ್ಲ. ಆದರೆ ಅಲ್ಲಾಹನಿಗೆ ಭಯಪಡುವವರು ಮತ್ತು ಅಲ್ಲಾಹನ ಮಹತ್ವ ಹೃದಯದಲ್ಲಿ ಹೊಂದಿರುವವರು ಹೇಗಿರುತ್ತಾರೆಂದರೆ ಅಲ್ಲಾಹನು ಅವರಿಗೆ ಗೌರವ ನೀಡುತ್ತಾನೆ. ಅವನು ಅವರಿಗೋಸ್ಕರ ಒಂದು ಗುರಾಣಿ ಆಗುತ್ತಾನೆ. ಹದೀಸಿನಲ್ಲಿ ಹೀಗೆ ಬಂದಿದೆ: **ಮನ್‌ಕಾನ ಲಿಲ್ಲಾಹಿ ಕಾನಲ್ಲಾಹು ಲಹೂ.** ಯಾರು ಅಲ್ಲಾಹನಿಗೆ ಸೇರಿದವನಾಗುತ್ತಾನೋ ಅಲ್ಲಾಹನು ಅವನಿಗೆ ಸೇರಿದವನಾಗುತ್ತಾನೆ.

ನೀವು ಚೆನ್ನಾಗಿ ನೆನಪಿಡಿರಿ, ಪ್ರತಿಯೊಂದು ಅಭಿವೃದ್ಧಿ ಹಂತ ಹಂತವಾಗಿ ಆಗುತ್ತದೆ. ನಾವು ಮುಸ್ಲಿಮರು, ನಾವು ಸತ್ಯವಿಶ್ವಾಸಿಗಳು ಎಂದು ಬರೇ ಬಾಯಿ ಮಾತಿನಿಂದ ಹೇಳಿದ ಮಾತ್ರಕ್ಕೆ ಅಲ್ಲಾಹನು ಸಂತೋಷಪಡಲಾರನು. ಅಲ್ಲಾಹನು ಸ್ವತಃ ಹೇಳಿದ್ದಾನೆ: **ಅಹಸಿಬನ್ನಾಸು ಅನ್ ಯತ್‌ರುಕೂ ಅನ್ ಯಖೂಲೂ ಆಮನ್ನಾ ವ ಹುಮ್‌ಲಾ ಯುಫ್ತನೂನ್.** ಏನು ಈ ಜನರು ಯೋಚಿಸುತ್ತಿದ್ದಾರೆಯೇ, ಅವರು ನಾವು ವಿಶ್ವಾಸಿಗಳಾಗಿದ್ದೇವೆ ಎಂದು ಹೇಳಿದ ಮಾತ್ರಕ್ಕೆ ನಾವು ಸಂತೃಪ್ತರಾಗುವೆವು ಮತ್ತು ಅವರನ್ನು ಬಿಟ್ಟು ಬಿಡುವೆವು ಎಂದು? ಮತ್ತು ಅವರು ಪರೀಕ್ಷೆಗಳಿಗೊಳಪಡಲಾರರೆಂದು ಅವರು ಭಾವಿಸಿದ್ದಾರೆಯೇ?

ಇಸ್ಲಾಮ್ ನೀಡಿದ ಉಪದೇಶವೇನೆಂದರೆ, **ಖದ್ ಅಫ್‌ಲಹ ಮನ್ ಝಕ್ಕಾಹಾ**. ಅದನ್ನು (ಅಂದರೆ ಆತ್ಮವನ್ನು) ಪರಿಶುದ್ಧವಾಗಿರಿಸಿದವನು ಖಂಡಿತವಾಗಿಯೂ ಜಯಗಳಿಸಿದನು. (91:10). ಎಲ್ಲಾ ವಿಧಗಳ ನವೀನಾಚರಣೆಗಳು, ದೇವಾಜ್ಞೆ ಉಲ್ಲಂಘನೆ ಮತ್ತು ಶಾರೀರಿಕ ಆಶಾಭಿಲಾಷೆ ಗಳಿಂದ ಅಲ್ಲಾಹನಿಗೋಸ್ಕರ ದೂರ ಸರಿಯಬೇಕು. ಎಲ್ಲಾ ವಿಧಗಳ ಶಾರೀರಿಕ ಅಭಿರುಚಿಗಳನ್ನು ಬಿಟ್ಟು ಅಲ್ಲಾಹನಿಗೋಸ್ಕರ ಪ್ರಯಾಸಗಳನ್ನು ಅನುಭವಿಸು ವುದಕ್ಕೆ ಆದ್ಯತೆ ನೀಡಬೇಕು. ಇಂತಹ ವ್ಯಕ್ತಿಯೇ ಜಯಶಾಲಿ ಆಗುವನು. ಅವನು ಅಲ್ಲಾಹನಿಗೆ ಆದ್ಯತೆ ನೀಡುತ್ತಾನೆ. ಅವನು ಲೋಕ ಮತ್ತು ಅದರ ವೈಭವಗಳನ್ನು ಬಿಟ್ಟು ಬಿಡುತ್ತಾನೆ.

ನಾವು ನಮ್ಮೊಳಗೆ ಈ ಎಲ್ಲಾ ಬದಲಾವಣೆಗಳನ್ನು ಉಂಟುಮಾಡುವವರ ನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ಸತ್ಯದ ಉನ್ನತ ಮಟ್ಟವನ್ನು ಮನವರಿಕೆ ಮಾಡುವವರಾಗಲಿ. ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ, ಕೇವಲ ಬಾಯಿ ಮಾತಿನಲ್ಲಿ ಮಾತ್ರ ಅಲ್ಲ, ವಾಸ್ತವಿಕವಾಗಿ ಅವರ ಆಗಮನದ ಉದ್ದೇಶ ಲಕ್ಷ್ಯಗಳನ್ನು ಮನವರಿಕೆ ಮಾಡುವವರಾಗೋಣ ಮತ್ತು ಅವುಗಳನ್ನು ಈಡೇರಿಸುವವರಾಗೋಣ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ಅನುಸರಿಸಿ ಅದರಂತೆ ವರ್ತಿಸಲು ಪೂರ್ಣ ಪ್ರಯತ್ನ ಮಾಡುವವರಾಗೋಣ. ಅಲ್ಲಾಹನ ಸಂಪ್ರೀತಿಗೆ ಪ್ರತಿಯೊಂದರ ಮೇಲೆ ಆದ್ಯತೆ ನೀಡಿ ಅದನ್ನು ಗಳಿಸಲು ಪ್ರಯತ್ನಿಸುವವ ರಾಗೋಣ. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್ರಮ್ ಖಾಸಿಮ್ ತೂರೆ ಸಾಹೇಬ್ (ಮುಬಲ್ಲಿಗ್) ಅವರು ನಿಧನ ಹೊಂದಿದ ಬಗ್ಗೆ ತಿಳಿಸಿ, ಅವರ ಸದ್ಗುಣಗಳನ್ನೂ ಸೇವೆಯನ್ನೂ ವಿವರಿಸಿ, ಅವರ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಪ್ರಕಟಿಸಿದರು).

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 05-02-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon